# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)

## ಉದ್ಯೋಗ ಪ್ರಕಟಣೆ

ದಿನಾಂಕ: 8 MAR 2019

ಸಂಖ್ಯೆ: ಕವಿಪ್ರನಿನಿ/ಬಿ16/3590(2)/1989-90

**ಕವಿಪ್ರನಿನಿಯಲ್ಲಿ 24-ಕಿರಿಯ ಪವರ್‌ಮ್ಯಾನ್ (ಕಿರಿಯ ಮಾರ್ಗದಾಳು) ಮತ್ತು 3-ಕಿರಿಯ ಸ್ಟೇಷನ್ ಪರಿಚಾರಕ ಹುದ್ದೆಗಳ 'ಬ್ಯಾಕ್‌ಲಾಗ್ ಹುದ್ದೆ'ಗಳನ್ನು ವಿಶೇಷ ನೇಮಕಾತಿ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಂದ ಭರ್ತಿ ಮಾಡುವ ಬಗ್ಗೆ.**

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಬ್ಯಾಕ್‌ಲಾಗ್ ಅಡಿಯಲ್ಲಿ ಬಾಕಿ ಉಳಿದಿದ್ದ 24 ಸಹಾಯಕ ಮಾರ್ಗದಾಳು ಮತ್ತು 3-ಸ್ಟೇಷನ್ ಪರಿಚಾರಕ ದರ್ಜೆ-2 ಹುದ್ದೆಗಳು ಅರ್ಹ ಅಭ್ಯರ್ಥಿಗಳ ಕೊರತೆಯಿಂದ ಭರ್ತಿಮಾಡಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಶಿಫಾರಸ್ಸಿನ ಮೇರೆಗೆ ದಿನಾಂಕ: 15.12.2017 ರ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/3590/89-90(2) ರಲ್ಲಿ ಸದರಿ ಹುದ್ದೆಗಳನ್ನು "ಕಿರಿಯ ಪವರ್‌ಮ್ಯಾನ್ (ಕಿರಿಯ ಮಾರ್ಗದಾಳು)" ಮತ್ತು " ಕಿರಿಯ ಸ್ಟೇಷನ್ ಪರಿಚಾರಕ " ಹುದ್ದೆಗಳಾಗಿ ಪರಿವರ್ತಿಸಲಾಗಿರುತ್ತದೆ. ಈ ಪರಿವರ್ತಿತ ಒಟ್ಟು 27 ಹುದ್ದೆಗಳನ್ನು "**ವಿಶೇಷ ನೇಮಕಾತಿ**" ಮೂಲಕ ಭರ್ತಿ ಮಾಡಲು ಎಸ್.ಎಸ್.ಎಲ್.ಸಿ ಅಥವಾ 10ನೇ ತರಗತಿಯ ಪರೀಕ್ಷೆಯನ್ನು ಕರ್ನಾಟಕ ರಾಜ್ಯದ ವಿದ್ಯಾಸಂಸ್ಥೆಗಳಿಂದ ತೇರ್ಗಡೆ ಹೊಂದಿರುವ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ 'ಆನ್ - ಲೈನ್' (ON-LINE) ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ.

ಕವಿಪ್ರನಿನಿ ವೆಬ್ ಸೈಟ್ www.kptcl.com ಮೂಲಕ ನಿಗದಿತ ನಮೂನೆಯಲ್ಲಿ ಆನ್-ಲೈನ್ ಮೂಲಕ ಮಾತ್ರವೇ ಅರ್ಜಿಗಳನ್ನು ಸಲ್ಲಿಸುವುದು. ಹುದ್ದೆಗಳ ವರ್ಗೀಕರಣ, ಮೀಸಲಾತಿ ವಿವರ, ವಯಸ್ಸು, ಅರ್ಹತೆ, ಅರ್ಜಿ ಸಲ್ಲಿಸುವಿಕೆಯ ದಿನಾಂಕ ಮತ್ತು ಇತರೆ ವಿವರಗಳನ್ನು, ದಿನಾಂಕ: 11.03.2019 ರ ನಂತರ ಕವಿಪ್ರನಿನಿಯ ವೆಬ್ ಸೈಟ್ www.kptcl.com ಮೂಲಕ ಪಡೆಯಬಹುದಾಗಿರುತ್ತದೆ.

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)
ನಿಗಮ ಕಾರ್ಯಾಲಯ, ಕವಿಪ್ರನಿನಿ,
ಕಾವೇರಿ ಭವನ, ಬೆಂಗಳೂರು.